| Sl No | **Sri Krishna Lila** | Time (Minutes) |
|---|---|---|
| 1 | Procession Song - ನಡೆದು ಬಾರಯ್ಯ ಭವ ಕಡಲಿಗೆ ಕುಂಭ ಸಂಭವ | 7 |
| 2 | Lighting the lamp - ಮಂತ್ರ and ಏನು ಬೇಡಲಿ ಗುರುವೇ | 6 |
| 3 | Tilak Ceremony (2 songs if possible) - 1. ಮೇ ತೇರಿ ಸಂಗ್ ಹರ್ ಪಲ್ | 20 |
| | 2. ಪ್ರಭು ಏಸಾ ವರ್ದನ್ ದೋ | |
| | 3. ಸಾಧನೆಗೆ ಶೋಧನೆಯೇ ದಿವ್ಯ ದೀವಿಗೆಯು | |
| 4 | Birth in ಮಥುರಾ - ಅಳುವುದ್ಯಾತಕೊ ರಂಗಯ್ಯ | 4 |
| 5 | Bala Leele - Childhood adventures in Gokula and Vrindavan. (Oralukallu elediddu/ mosaru benne - Amma naanu devarane benne kaddillamma | 4 |
| 6 | Kaliya Naga Mardana/ Lifting of Govardhana mountain - 1.ತಾತ್ತ ಧಿಮಿತ ಧಿಮಿಕಿ ಎನುತ 2.ಗೋವಿಂದ ಗೋಪಾಲ ಗೋಪಿಕಾ ವಲ್ಲಭ | 3 + 4 |
| 7 | Kamsa samhara - ಆವ ಕುಲವೋ ರಂಗ | 5 |
| 8 | Relationship with cows - ಕಾದನ ವತ್ಸವ ಹರಿ ಕಾದನ | 4 |
| 9 | Education, Friendship with Sudhama, Krishna Balarama Rescued Sandipini's son and gave as ಗುರುದಕ್ಷಿಣ - ಹರಿ ಸುಂದರ ನಂದ ಮುಕುಂದ and Bare sakhi rasa krideyaduva | 4 + 4 |
| 10 | Establishment of Dwaraka - ಕಾನ್ಹರೆ ನಂದ ನಂದನ | 5 |
| 11 | Marriage to ರುಕ್ಮಿಣಿ - ಬಿನತಿ ಸುನಿಯೇ ನಾಥ ಹಮಾರಿ | 5 |
| 12 | Krishna and Mahabharata - Charioteer of the Pandava Arjuna - war (War with Karna) Chariot burned after the ಮಹಾಭಾರತ - ತೋಳು ತೋಳು ತೋಳು ರಂಗ | 6 |
| 13 | Bhagavadgeeta - kanhare kanha | 5 |
| 14 | Krishna and ವಿಷ್ಣುಸಹಸ್ರನಾಮ - ಗುಬ್ಬಿಯಾಳೋ ಗುಬ್ಬಿಯಾಳೋ ಗೋವಿಂದ | 5 |
| 15 | Parandhama Pravesha - ನರ ಜನ್ಮ ಬಂದಾಗ ನಾಲಿಗೆ ಇರುವಾಗ or nee sigade balondu baale | 4 |

## Song -1

ನಡೆದು ಬಾರಯ್ಯಾ |ಭವ ಕಡಲಿಗೇ ಕುಂಭಸಂಭವಾ...|
ಸಡಗರದಿಂದ ಮೆಲ್ಲಡಿಯನಿಡುತ ಬೇಗ
ಎಡಬಲದಲಿ ನಿನ್ನ ಮಡದಿರಿಂದೊಡಗೂಡಿ
ತಡಮಾಡದೆ ಬಾ ಮೃಡಸಖ ವೆಂಕಟ ... ನಡೆದು
||ನಡೆದು||

ವಿಜಯದಶಮಿ ಆಶ್ವಿಜ ಶುಧ್ದ ಮಾಸದಲ್ಲಿ
ನಿಜರಥಾರೂಢನಾಗಿ ಸುಜನರಿಂದೊಡಗೂಡಿ
ಗಜಸಿಂಹ,ಮಯೂರ,ದ್ವಿಜ ಸಿಂಗ,ಸಾರಂಗ
ಮಜಬಾಪುರೆ ಎನಲು ತ್ರಿಜಗವು ತಲೆದೂಗೇ...ಏ...ಏ...
ಅಜನು ಸ್ತುತಿಯ ಮಾಡೆ ರುಜಗಣಾಧಿಪ ಪಾಡೆ
ಗಜಮುಖನಯ್ಯ ನಿಜಾನಂದದಲಾಡೆ
ಭುಜಗಶ್ರೇಷ್ಠ ದ್ವಿಜರಾಜರು ಜಯವೆನ್ನೆ
ಕುಜನರೆದೆಯ ಮುಟ್ಟಿ ರಜತಮ ಕಳೆಯುತ ನಡೆದು....ನಡೆದು||ನಡೆದು ಬಾರಯ್ಯ||

ದಕ್ಷಿಣ ದಿಕ್ಕಿನಲ್ಲಿ ,ರಾಕ್ಷಸರೆದುರಾಗಿ
ಒಂದಕ್ಷೋಹಿಣಿ ಬಲ
ನಿನ್ನುಪೇಕ್ಷೆ ಮಾಡುತಲಿರೆ
ಪಕ್ಷಿವಾಹನನೆನಿಸಿ ನೀನಾಕ್ಷಣದಲ್ಲಿ ಖಳರ ಶಿಕ್ಷಿಸಿ
ಸುಜನರ ರಕ್ಷಿಸಿ ಮೆರೆದಯಾ...ಆ....
ತಕ್ಷಕ ನರನನು ಭಕ್ಷಿಸಬರುತಿರೆ ಈಕ್ಷಿಸಿ ತಕ್ಷಣ
ರಥನೆಲಕ್ಕೊತ್ತಿದೆ, ಲಕ್ಷ್ಮೀಶನೆ ಅಕ್ಷಯ ಫಲದಾಯಕ
ಕುಕ್ಷಿಯೊಳಗೆ ಜಗರಕ್ಷಿಪ ವಿಶ್ವ.....
||ನಡೆದು ಬಾರಯ್ಯ||

ಮನಕೆ ಬಾರಯ್ಯ ಸುಧಾಮನ ಸಖ ಹರಿಯೆ। ಸೋಮನ ಧರಿಸಿದವನೆ ಮನ ಕುಮುದಕೆ ಚಂದ್ರಮನೆ ಕೇಳು ಎನ್ನ
ದುಮ್ಮನವನೆ ಪರಿಹರಿಸಿ ಒಮ್ಮನ ಕೊಡು ಅಹಿ ಗಿರಿ ತಿಮ್ಮನೆ ಕೇಳು ಬಿನ್ನಪಾ॥
ಕೊಂಬು ಕಹಳೆಗಳು ಬಾಂಬೋರಿಡುತಿರೆ ತುಂಬುರುನರಾದರ್ ಇಂಪಾಗಿ ಪಾಡಲು
ಅಂಬರದಲಿ ವಾದ್ಯ ಧೀಂ ಧೀಂ ಧಿಮಿಕೆನ್ನೇ । ಸಂಭ್ರಮದಲಿ ಬಾರೋ ಶಂಭು ವಂದಿತನೆ ||ನಡೆದು ಬಾರಯ್ಯ||

ಪರಿಪರಿ ವಿಧದಿಂದ ಕರವ ಮುಗಿದು ಸ್ತುತಿಸಿ
ಕರೆದರೆ ಬಾರದ ಗರುವ ತನವು ಯಾಕೊ
ಕರಿಯ ಮೊರೆಯ ಕೇಳಿ, ಸಿರಿಗೆ ಹೇಳದೆ ಬಂದೆ
ಕರಿರಾಜ ಅವನಿನ್ನ ಹಿರಿಯಪ್ಪನ ಮಗನೇನೊ...ಓ....ಓ..
ಶರಣಾಗತ ರಕ್ಷಕ ಮಣಿ ಎಂಬುವ
ಬಿರುದು ಬೇಕಾದರೆ ,ಸರಸರ ಬಾರಯ್ಯ,
ಗರುಡ ಗಮನ ಗೋಪಾಲ ವಿಠ್ಠಲರೇಯ ಕರುವಿನ ಮೊರೆಗಾವು ನೆರೆದಂತೆ ಪೊರೆಯಲು ||ನಡೆದು ಬಾರಯ್ಯ||

|

## Song – 2

ಏನು ಬೇಡಲಿ ಗುರುವೆ ಜ್ಞಾನ ಭಿಕ್ಷೆಯ ಹೊರತು ಜ್ಞಾನ ಯೋಗಾಶ್ರಮದ ಸಿದ್ಧೇಶ್ವರ

ಜ್ಞಾನ ಸಂಪುಟ ಸಿರಿಯೇ ಜ್ಞಾನ ಗುಮ್ಮಟ ಗಿರಿಯೇ
ಜ್ಞಾನಧಾರೆಯ ಹರಿಸು ಜ್ಞಾನೇಶ್ವರ

ಎದೆ ಹೊಲದ ಕಸವನ್ನು ಹಸನಾಗಿ ಕಿತ್ತೆಸೆದು
ಹೊಸ ಮಳೆಯ ಹೊಸ ಕಳೆಯ ತರಿಸು ಗುರುವೆ
ಜ್ಞಾನ ಬೀಜವ ಬಿತ್ತಿ ಜಾಣ ಬೆಳೆಯನು ಬೆಳೆದು
ಜ್ಞಾನ ಬುತ್ತಿಯ ಬಿಚ್ಚಿ ಉಣಿಸು ಗುರುವೆ

ನಿತ್ಯ ಸತ್ಯದ ಪ್ರೀತಿ ಶೂನ್ಯ ತತ್ವದ ನೀತಿ
ನನ್ನೊಡಲ ತುಂಬೆಲ್ಲ ಸುರಿಸು ಗುರುವೆ
ಸನ್ನಡತೆ ಸಿರಿವಂತ ಮುನ್ನಡೆಸೊ ಗುಣವಂತ
ಸನ್ನಿಧಿಯ ಸುಖದಲ್ಲಿ ಇರಿಸು ಗುರುವೆ

ಆತ್ಮ ಶಿಕ್ಷಣದೆಡೆಗೆ ಆತ್ಮ ತೃಪ್ತಿಯ ನಡಿಗೆ
ಆತ್ಮ ಸಾಕ್ಷಿಯ ಕಡೆಗೆ ಹರಸು ಗುರುವೆ
ಆತ್ಮ ಜ್ಞಾನದ ಬಂಧು ತತ್ವಜ್ಞಾನದ ಸಿಂಧು
ಆತ್ಮ ಉನ್ನತಿ ಕಡೆಗೆ ನಡೆಸು ಗುರುವೆ

## Song – 3 ( 1 )

ತಿಲಕ್ ಹಾಡು

ಮೇ ಹೂಂ ತೆರೆ ಮನ್ ಕಾ ಸಖ, ಹೇ ಮೇರೇ ಪ್ಯಾರೆ
ಮೇ ತೇರೆ ಸಂಗ ಹೂಂ, ಹರ್ ದುಃಖ್ ಹಾರೆ
ಜಬ್ ಜಬ್ ತೂ ಥಕ್ ಜಾಯೇ ಜೀವನ್ ಕೀ ರಾಹ
ಮುಝೆ ಪುಕಾರ್‌ಲೇನಾ ಶ್ರದ್ಧಾ ಕೀ ಚಾಹ
ನಾ ಮೇ ದೂರ್, ನ ಪಲ್‌ಭರ್ ಕೋ ಜಾವೂಂ
ತೆರೆ ಸಂಗ್ ಹರ್ ಕ್ಷಣ್ ಮೇ ಹೀ ರೆಹ್ ಜಾವೂಂ

ಮೇ ಹೂಂ ತೇರೆ ಸಂಗ್ ಹರ್‌ಪಲ್
ಛಾಯಾ ಬನ್‌ಕರ್ ಚಲತಾಹೂಂ
ತೂ ಬಸ್ ನಾಮ್ ಜಪತಾ ರಹೆ
ಮೇ ತೇರಾ ರಥ್ ಹಾಂಕ್‌ತಾ ಹೂಂ ॥

ಜಹಾ ಧೈರ್ಯ್ ಟೂಟೆ, ವಹಾ ಪ್ರೇಮ್ ಬೋದೇನಾ ।
ಅಂಧೇರಾ ಗಹರಾಯೇ, ತೋ ದೀಪ್ ಹೋ ಜಾನಾ
ಕರ್ಮ್ ಕರ್ ನಿಃಸ್ವಾರ್ಥ್, ಫಲ್ ಮುಝ್‌ಪರ್ ಛೋಡ್
ಹರ್ ಶ್ವಾಸ್ ಮೇ ಮೆರಾ ನಾಮ್ ಜೋಡ್ ॥೧॥

ತೇರೆ ಆಂಸೂ ಮೇಭೀ ಮೇ ಹೂಂ
ತೇರೆ ಹಸೀ ಮೇಭೀ ಮೇ ಹೂಂ
ತೇರೆ ಹರ್ ಪೀಡಾ ಹರತಾ ಮೇ ಹೀ
ತೇರೆ ಹೃದಯ್ ಮೇ ಬಸತಾ ಮೇ ಹೀ
ಭಕ್ತಿಮೇ ಢಲ್ ಜಾ, ಮುಝ್ ಮೇ ಸಮಾ ಜಾ
ಫಿರ್ ಮನ್ ಸಾಗರ್ ಸಾ ಶಾಂತ್ ಹೋಜಾಯೇಗಾ ॥೨॥

ಯಹ್ ಸಂಸಾರ್ ಏಕ್ ಖೇಲ್ ಸಪನೋಂ ಕಾ ಮೇಲಾ
ಕ್ಯೋಂ ಇಸ್ ಮೇ ಉಲ್‌ಝಾ ಹೈ, ಕ್ಯೊಂ ಸಮಝೆ ಅಕೇಲಾ
ಯೇ ಸಾರೆ ಸಂಬಂಧ, ಸಬ್ ಮೇರೇಬನಾಯೇ ಮುಝಸೇ ಹೀ ಉಪಜೇ, ಮುಝಮೇ
ಸಮಾಯೇ
ಸಬ್ ಚಿಂತಾ ಮುಝ್ ಕೋ ಸೋಂಪ್ ದೇ ಆಜ್
ಹರ್ ಕ್ಷಣ್ ಮುಝ್ ಮೇ ದೇಖ್ ಅಪನಾ ರಾಜ್ ॥೩॥

ಮನುಷ್ಯ ತನ್ ಪಾಯಾ, ಯೇ ಸಂಯೋಗ್ ನಹೀ
ಭಕ್ತಿ ಕಾ ಪಥ್ ಹೀ ಸಚ್ಚಾ ಯೋಗ್ ಯಹೀ
ಸತ್ಯ ಔರ್ ಸೇವಾ ಮೇ ಜೀವನ್ ಢಲೇ
ತೋ ಮುಜ್ ತಕ್ ಪಹುಂಚನೇ ಕೇ ದ್ವಾರ್ ಖುಲೇ
ನ ಧನ್, ನ ಯಶ್, ನ ಕೋಯಿ ಅಧಿಕಾರ್ಕೆವಲ್ ಪ್ರೇಮ್ ಸೇ ಮಿಲತಾ ಆಧಾರ್ ॥೪॥

ತೂ ಮುಝೇ ಬಾಹರ್ ಢೂಂಢತಾ ಬಾರ್ ಬಾರ್
ಮೇ ತೇರೆ ಭೀತರ್ ಹೀ ಅಪಾರ್
ತೇರೆ ಹರ್ ಭಾವ್ ಮೇ ಬಸತಾ ಮೇ
ತೇರೆ ಹೃದಯ್ ಮೇ ರಹತಾ ಮೇ
ಜಬ್ ಮನ್ ಶಾಂತ್ ಹೋ, ಆಸೂಂ ಥಮ್ ಜಾಯೇ
ತಬ್ ಹೀ ಮೇರೇ ದರ್ಶನ್ ಸಚ್ಚೆ ಕೆಹಲಾಯೇ ॥೫॥

ಜಬ್ ಸಂಕಟ್ ಆಯೇ, ತಬ್ ವಿಶ್ವಾಸ್ ರಖ್
ಹರ್ ಕಠಿಣಾಯೀ ಮೇ ಮುಝ್ ಕೋ ಪಹಚಾನ್ ರಖ್
ಮೇ ತೇರೆ ಸಂಗ್ ಹೂಂ ಅಂಧಿಯಾರೇ ಮೇ
ತೇರಾ ರಕ್ಷಕ್ ಹೂಂ ಹರ್ ಪ್ಯಾರೇ ಮೇ
ಧೈರ್ಯ ರಖ್, ಮೇರೆ ವಚನ್ ಪರ್ ಅಡಿಗ್ ರಹೇ
ಸವೇರಾ ಖುದ್ ತೇರೆ ದ್ವಾರ್ ಪರ್ ಠಹರ್ ॥೬॥

## Song – 3 ( 2 )

ಹೇ ಕರುಣಾ ಮಯ ದಯಾನಿಧೆ ಸುನ್ ಲೆ ಹಮಾರಿ ವಿನತಿ ಭಗವಾನ್

ಪ್ರಭು ಐಸಾ ವರದಾನ್ ದೋ ಸಬಕಾ ಕಲ್ಯಾಣ್ ಹೋ

ಹರ್ ಹೃದಯ್ ಮೇ ಪ್ರೇಮ್ ಬಹೆ

ಹರ್ ಮನ್ ಮೇ ಜ್ಞಾನ್ ಹೋ

ಜೋ ಮಾರ್ಗ ಸೇ ಭಟ್ಕಾದೆ, ಉಸೆ ದಿಶಾ ದಿಖಾದೋ ಪ್ರಭು

ಜೋ ಅಜ್ಞಾನ್ ಮೇ ಡೂಬಾ ಹೈ,

ಉಸೆ ವಿವೇಕ್ ಸಿಖಾದೋ ಪ್ರಭು ll

ತೆರಿ ಕೃಪಾಸೆ ಮಿಟೇ ಅಂಧಕಾರ್,ಹರ್ ಜೀವನ್ ಉಜ್ವಲ್ ಹೋ..ಪ್ರಭು

ಜಹಾ ದ್ವೇಷ್ ಹೈ, ವಹಾ ದಯಾ ಕಾ ದೀಪ್ ಜಲೇ

ಜಹಾ ಭಯ್ ಹೇ, ವಹಾ ಭಕ್ತಿಕಾ ಸಂಗೀತ್ ಗೂಂಜೆ

ತೆರೆ ನಾಮ್ ಸೆ ಪುಲಕಿತ ಹೋ ಜಗ್ ಕಾ ಹರ್ ಪ್ರಾಣ್ ಹೋ.. ಪ್ರಭು

ಜಿಸನೆ ಕಿಯಾ ಅಪಕಾರ್, ಉಸೆ ಭಿ ಕ್ಷಮಾ ಮಿಲೇ,ಜೋ ಗಿರಾ ಹುವಾ ಹೈ ಪಥ್ ಮೇ, ಉಸೆ ಭೀ ಸಂಬಲ್ ಮಿಲೆ

ತೆರೆ ನಾಮ್ ಸೆ ಪಾವನ್ ಹೋ ಮನ್ ಕಾ ಪ್ರತ್ಯೇಕ ಕೋನಾ .. ಪ್ರಭು

ವರ್ಣ ಭೇದ್ ಸಬ್ ಮಿಟ್ ಜಾಯೇ, ಸಬ್ ಏಕ್ ಪರಿವಾರ್ ಬನೆ,ತೆರೆ ನಾಮ್ ಕಾ ದೀಪ ಹೃದಯ್ ಹೃದಯ್ ಮೇ ಜಲೇ

ಮಾತಾ ಪಿತಾ , ಸಖಾ ಸಬ್ ಪ್ರೇಮ್ ಕಾ ಪ್ರಮಾಣ ಹೋ…ಪ್ರಭು

ನದಿಯಾ ತೆರೆ ನಾಮ್ ಗುಂಗುನಾಯೆ, ಪರ್ವತ್ ತೆರಾ ಗುಣ್ ಗಾಯೇ

ಪವನ್ ಮೇ ತೇರಾ ಸಂದೇಶ ಬಹೆ,ಆಕಾಶ್ ತೆರಾ ಗಾನ್ ಸುನಾಯೇ ತೆರೆ ಕೃಪಾಸೆ ಸಜೀ ಯೇ ಧರತಿ ವರದಾನ ಹೋ.. ಪ್ರಭು

ತೆರೆ ಬಿನಾ ಕುಚ್ ನಹಿ, ತುಜ್ ಸೇ ಹಿ ಜೀವನ್ ಹೆ

ತೆರೆ ಹಿ ನಾಮ್ ಮೇ ಹಿ ಸುಖ್,ತೆರಾ ಧ್ಯಾನ್ ಹಿ ಸಾಧನ್ ಹೇ

ಭವ ಸಾಗರ್ ಸೆ ಪಾರ್ ಉತರೆ ತೆರೆ ಗುಣ್ ಗಾನ್ ಹೋ.. ಪ್ರಭು

ತೆರೆ ಬಿನಾ ಜಗ್ ರಿಕ್ತ ಹೇ

ತೆರೆ ಬಿನಾ ಮನ್ ಶೂನ್ಯ ಹೇ

ತೆರೆ ನಾಮ್ ಸೇ ಹಿ ಸೃಷ್ಟಿ ಕಾ ಗಾನ್ ಹೋ.. ಪ್ರಭು

ಹರ್ ಹೃದಯ್ ಮೇ ತೂ ವಾಸ್ ಕರೇ, ಹರ್ ಕರ್ಮ್ ತೆರಾ ಪ್ರಸಾದ್ ಹೋ

ಹರ್ ಜ ತೆರ ನಾಮ್ ಜಪೇ, ಹರ್ ಜೀವನ್ ತೆರಾ ವೃತ್ ಹೋ ತೆರೆ ಪ್ರೇಮ್ ಸೆ ಸಜೆ ಜಗ್ ಕಾ ಪ್ರತ್ಯೇಕ ಪ್ರಾಣ...

ಹರ್ ಶ್ವಾಸ್ ಮೇ ತೇರ ನಾಮ್ ಗೂಂಜೆ ಹರ್ ಕರ್ಮ್ ಮೇ ತೆರಾ ಧ್ಯಾನ್ ಹೋ ಭವಸಾಗರ್ ಕೇ ಪಾರ್

## Song – 3 ( 3 )

### ಸಾಧನೆಗೆ ಶೋಧನೆ

ಸಾಧನೆಗೆ ಶೋಧನೆಯೆ ದಿವ್ಯ ದೀವಿಗೆಯು
ಆದಿಯಲಿ ಮೋದದಲಿ ಅರಿ ಕಂಡ್ಯ ಮನುಜ

ಕನಕರಿಸಿ ಬೇಸರಿಸಿ ಅನುಸರಿಸಿ ಬಂದೆ
ಅನುದಿನವು ಅನ್ನ ವಸನಕ್ಕಾಗಿ ಬೆಂದೆ
ದೀನನಂತೆಸಮಯ ವ್ಯಯಿಸಿ ಬಹು ನಿಂದೆ
ತಂತಾನೆ ಅರಿಯದ ಅಜ್ಞಾನಿ ಎನಿಸಿದೆ ॥೧॥

ಜೀವಾಂತರಾಳದಲಿ ಊರಿರುವ ಬೀಜವದು
ಭಾವಾಂತಃಕರಣಕ್ಕೆ ಕರ್ಮ ಭೂಮಿಕೆಯು।
ಸಾವಧಾನದಿ ಅರಿತು ಸುಜ್ಞಾನಿಗಳ ಸಂಗದೆ
ಕಾವಭಾರವನ್ನೊತ್ತು ಎರಕವನ್ನೊಯ್ಯು ॥೨॥

ತ್ಯಾಗಭೋಗಾದಿಗಳ ಅಂತರವ ತಿಳಿಬೇಕು
ಭಾಗ್ಯಬಡತನಗಳ ಉದಾಸಿಸಲು ಬೇಕು।
ಯೋಗಮಾರ್ಗದಲಿ ಸಹನ ಶಕ್ತಿಯ ಬಿತ್ತಲು ಬೇಕು
ಚಿಗುರೊಡೆದ ಬೀಜವದು ಹೆಮ್ಮರವಾಗಲಿಬೇಕು ॥೩॥

ಕಾಲವದು ನಿಲ್ಲದದು ನಿರಂತರವು ಹೇಗೋ
ಚಲಿಸುತಿರು ದಿಶೆಯಲ್ಲಿ ಗುರಿಮುಟ್ಟುವ ಹಾಗೋ।
ತಲ್ಲಣಿಸದಲೇ ಹೊಂದು ಅಗಾಧನಭಧ್ವಾಂಗೊ
ಕಲ್ಪನೆಯ ಕನಸ ಸಾಕಾರಗೊಳಿಸಿನ್ನೆಂಗೋ॥೪॥

ಸಮಭಾವ ಸಂಶಕ್ತಿ ಸಂಪೂರ್ಣ ಯುಕ್ತಿ
ಸಂಭಾವ್ಯಸಾಧನಕೆ ಸಮಾಕಾರ ದೀಪ್ತಿ
ಕ್ಷಮತೆಯರಿತು ಭೂಮಿ ಬೆಳಗಿಸಲಿ ಕೀರ್ತಿ
ಸಂಶೋಧನೆಯು ತರಲಿ ಭರತ ಮಾತೆಯಲಿ ಭಕ್ತಿ॥೫॥

## Song - 4

ಅಳುವದ್ಯಾತಕೊ ರಂಗ ಅತ್ತರಂಜಿಪ ಗುಮ್ಮ

ಹುಟ್ಟಿದೇಳು ದಿವಸದಲಿ ದುಷ್ಟ ಪೂತನಿಯ ಕೊಂದೆ

ಮುಟ್ಟಿ ವಿಷದ ಮೊಲೆಯುಂಡ ಕಾರಣ

ದೃಷ್ಟಿ ತಾಕಿತೆ ರಂಗಯ್ಯ

ಬಾಲಕತನದಿ ಗೋಪಾಲಕರೊಡಗೂಡಿ

ಕಾಳಿಯ ಮಡುವನು ಕಲಕಿದ ಕಾರಣ

ಕಾಲು ಉಳುಕಿತೆ ರಂಗಯ್ಯ

ತುರುವ ಕಾಯಲು ಪೋಗೆ ಭರದಿ ಇಂದ್ರ ಮಳೆಗರೆಯೆ

ಬೆರಳಲಿ ಬೆಟ್ಟವನೆತ್ತಿದ ಕಾರಣ

ಬೆರಳು ಉಳುಕಿತೆ ನಿನಗೆ ರಂಗಯ್ಯ

ವಸುದೇವ ಸುತನಾಗಿ ಅಸುರರೆಲ್ಲರ ಮಡುಹಿ

ಹೆಸರಿನ ಮಲ್ಲರ ಮಡುಹಿದ ಕಾರಣ

ಕಿಸಿರು ತಾಕಿತೆ ರಂಗಯ್ಯ

ಶರಣು ವೇಲಾಪುರದ ಚೆಲುವ ಚೆನ್ನಿಗರಾಯ

ಪರಿಪರಿ ವಿಧದಿಂದ ಶರಣರ ಪೊರೆಯುವ ವರದ ಪುರಂದರವಿಠಲರಾಯ

## Song - 5

ಅಮ್ಮ ನಾನು ದೇವರಾಣೆ ಬೆಣ್ಣೆ ಕದ್ದಿಲ್ಲಮ್ಮ

ಎಲ್ಲ ಸೇರಿ ನನ್ನ ಬಾಯಿಗೆ, ಬೆಣ್ಣೆಯ ಮೆತ್ತಿದರಮ್ಮ

ಅಮ್ಮ ನಾನು ದೇವರಾಣೆ ಬೆಣ್ಣೆ ಕದ್ದಿಲ್ಲಮ್ಮ

ನೀನೆ ನೋಡು ಬೆಣ್ಣೆ ಗಡಿಗೆ, ಸೂರಿನ ನಿಲುವಲ್ಲಿ

ಹೇಗೆ ತಾನೆ ತೆಗೆಯಲಿ ಅಮ್ಮ, ನನ್ನ ಪುಟ್ಟ ಕೈಗಳಿಂದ ||ಅಮ್ಮ ನಾನು||

ಶಾಮ ಹೇಳಿದಾ...

ಶಾಮ ಹೇಳಿದ ಬೆಣ್ಣೆ ಮೆತ್ತಿದ ತನ್ನ ಬಾಯಿ ವರಸುತ್ತ

ಬೆಣ್ಣೆ ಮೆತ್ತಿದಾ ಕೈಯ, ಬೆನ್ನ ಹಿಂದೆ ಮರೆಸುತ್ತಾ ||ಅಮ್ಮ ನಾನು||

ಎತ್ತಿದ ಕೈಯ ಕಡೆಗೋಲನ್ನು, ಮೂಲೆಲಿಟ್ಟು ನಕ್ಕಳು ಗೋಪಿ

ಸೂರದಾಸ ಪ್ರಿಯ ಶಾಮನಾ, ಮುತ್ತಿಟ್ಟು ನಕ್ಕಳು ಗೋಪಿ ||ಅಮ್ಮ ನಾನು||

## Song – 6 ( 1 )

ತತ್ತತ ಧಿಮಿತ ಧಿಮಿಕಿ ಎನುತ ಹರಿಯಾಡಿದನೇ

ಚಿತ್ತಜಪಿತ ಉತ್ತಮ ಮುತ್ತಿನ ಗೊತ್ತುಗಳ್ ಕುತ್ತಿಗೆಯೊಳಗೆತ್ತಾಡುತ ||

ಹಾರಪದಕ ಕೇಯೂರ ಕಿರೀಟ

ಧೀರ ಭಾಪುರಿ ಯದುವೀರ ಹೊಳೆಯುತಿರೆ

ಮಾರಜನಕ ಸುಕುಮಾರ

ಸಾರಗುಣಸಾಂದ್ರ ಮಹಿಮ ಹರಿ ||೧||

ಮಂದಗಮನೆಯರು ವೃಂದ

ವೃಂದದಲಿ ಚಂದ ನೋಡುತಿರೆ

ಆನಂದಗೋಪನ ಕಂದ ಮುಕುಂದ

ನಿತ್ಯಾನಂದ ಹರೇ ॥೨॥

ಕಂಕಣ ವಂಕಿಯು ಕಿಂಕಿಣಿ ರವಗಳು

ಶಂಖಚಕ್ರ ದಿವ್ಯ ಪಂಕಜಮಾಲೆಯು

ಶಂಖಧರ ಶ್ರೀ ಪುರಂದರ ವಿಠ್ಠಲ

ವೇದಾಂತವೇದ್ಯ ಶ್ರೀಕೃಷ್ಣ ||೨||

**Song -6 (2)**

"ಗೋವಿಂದ ಗೋಪಾಲ ಗೋಪಿಕಾ ವಲ್ಲಭ

ಗೋವರ್ಧನೋದ್ಧಾರಕ ಗೋವರ್ಧನೋದ್ಧಾರಕ ||

ನಾರಾಯಣ ಅಚ್ಯುತ ನರ ಮೃಗ ರೂಪಾ,

ಶ್ರೀಪತಿ ಶೌರಿ ಹರಿ |

ವಾರಿಜೋದ್ಭವ ವಂದ್ಯಾ ವಂದಿತ ಚರಿತ್ರಾ,

ಪುರಮರ್ಧನ ಮಿತ್ರ ಪರಮ ಪವಿತ್ರ ||ಗೋವಿಂದ ಗೋಪಾಲ ||

ಗರುಡ ತುರಗ ಗಮನ ಕಲ್ಯಾಣ |

ಗುಣಗಣ ನಿರುಪಮಾ ಲಾವಣ್ಯ ನಿರ್ಮಲ

ಶರಣ್ಯ ಪರಮ ಮುನಿವರೇಣ್ಯ

ಭಕ್ತಲೋಕ ಕಾರುಣ್ಯ || ಗೋವಿಂದ ಗೋಪಾಲ ||

ಇನ ಶಶಿ ಲೋಚನಾ ಇಂದು ನಿಭಾನನ ಎನುತಾ ಕುಂಡಲ ನಾದನ

ಕನಕಮಯ ವಾಸನ ಘನ ಪಾಪ ನಾಶನ

ಎನುತಾ ಕುಂಡಲ ನಾದನಾ ವೇಣುನಾಥ ಹಯವದನ ||"

**Song -7**

ಆವ ಕುಲವೋ ರಂಗಾ
ಅರಿಯಲಾಗದು ||
ಆವ ಕುಲವೆಂದರಿಯಲಾಗದು
ಗೋವ ಕಾಯ್ವ ಗೊಲ್ಲನಂತೆ
ದೇವಲೋಕದ ಪಾರಿಜಾತವು
ಹೂವ ಸತಿಗೆ ತಂದನಂತೆ||

ಗೋಕುಲದಲ್ಲಿ ಹುಟ್ಟಿದನಂತೆ
ಗೋವುಗಳನ್ನು ಕಾಯ್ದನಂತೆ ||
ಕೊಳಲನೂದಿ ಮೃಗಪಕ್ಷಿಗಳ
ಮರಳು ಮಾಡಿದನಂತೆ
ತರಳತನದಿ ವರಳ ನೆಗಹಿ
ಮರವ ಮುರಿದು ಮತ್ತೆ ಹಾರಿ
ತೆರೆದು ಬಾಯಿಯೊಳಗಿರೇಳು ಲೋಕವ
ಇರಿಸಿ ತಾಯಿಗೆ ತೋರ್ದನಂತೆ ||

ಗೊಲ್ಲತಿಯರ ಮನೆಗೆ ಪೊಕ್ಕು
ಕಳ್ಳತನವ ಮಾಡಿದನಂತೆ ||
ಒಲ್ಲದ ಪೂತನಿಯ ವಿಷವನುಂಡು
ಮೆಲ್ಲನೆ ತೃಣನ ಕೊಂದನಂತೆ
ಪಕ್ಷಿ ತನ್ನ ವಾಹನವಂತೆ
ಹಾವು ತನ್ನ ಹಾಸಿಗೆಯಂತೆ
ಮುಕ್ಕಣ್ಣ ತನ್ನ ಮೊಮ್ಮಗನಂತೆ
ಮುದ್ದುಮುಖದ ಚೆಲ್ವನಂತೆ ||

ಕರಡಿ ಮಗಳ ತಂದನಂತೆ
ಶರಧಿ ಮಗಳು ಮಡದಿಯಂತೆ ||
ಧರಣಿಯನ್ನು ಬೇಡಿದನಂತೆ
ಈರೇಳು ಲೋಕದ ಒಡೆಯನಂತೆ
ಹಡಗಿನಿಂದಲಿ ಬಂದನಂತೆ
ಕಡಲದಡೆಯಲಿ ನಿಂದನಂತೆ
ಒಡನೆ ಮಧ್ವರಿಗೊಲಿದನಂತೆ
ಒಡೆಯ ಹಯವದನನಂತೆ ||"

## Song – 8

ಕಾದನಾ ವತ್ಸವ ಹರಿ ಕಾದನಾ ।
ಮೋದದಿಂದ ಮಾಧವ

ವೇದವೇದ್ಯ ಸಾಧುವಿನುತರಾದಿಕಾ ರಮಣ ಕೃಷ್ಣ
ಎಳೆಯ ಗರಿಕೆ ಇರುವ ಸ್ಥಳದಿ ನೆರೆದು ವತ್ಸಗಳನೆ ನಿಲಿಸಿ ॥
ಕೊಳಲು ಕೈಲಿ ಪಿಡಿದು ಮುರಲಿಗಾನ ಮಾಡುತ್ತಾ ॥೧॥

ತನ್ನ ಶೆರಗು ತೆಗೆದು ಕೃಷ್ಣ ಕರುಗಳನ್ನೆ ಬೆನ್ನೊರಿಸಿ ।
ತಿನ್ನು ತಿನ್ನು ಪುಲ್ಲು ಯೆನುತ ಘನ್ನ ಕರುಗಳೊತ್ತುತ್ತ ॥೨॥

ಉಡುಗಳಂತೆ ಕರಗಳು ನಡುವೆ ಚಂದ್ರ ಧರೆಯೊಳು ॥
ಪೊಡವಿಯೊಳಗೆ ಬೆಳಗಲು ಆ ಮೃಡನು ಕೊಂಡಾಡಲು॥೩॥

ಒಂದು ತಿಂಗಳ ಕರುಗಳು ಇಂದಿರೇಶನು ಮೇಯಿಸಲು ।
ಬಂದು ವರುಷ ಕರುಗಳಂತೆ ಆನಂದದಿಂದ ಬೆಳೆದವು ॥೪॥

ಕನಕ ರಜತ ಸರಪಳಿ ದನಕರುಗಳ ಕೊರಳಲ್ಲಿ ।
ಇಣಕುವಂತರಳೆಲೆ ಅನೇಕ ನಾದ ಬೆರಳಲಿ ಮಾಡುತ॥೫॥

ಮರದ ನೆರಳು ವೊಳಗೆ ಕೃಷ್ಣ । ಮೆರೆದು ವತ್ಸಗಳನೇ ನಿಲಿಸಿ ।
ಕರೆದ ಪಾಲು ಕರದಿ ಪಿಡಿದು ನೆರೆದು ಬಾಯಲುಣಿಸುತ॥೬॥

ಅಜಗಳ್ಹಾಂಗ ಇದ್ದ ಕರುಗಳು ಗಜಗಳ್ಹಾಂಗ ಆದವು ।
ತ್ರಿಜಗದೊಡೆಯ ವಿಜಯವಿಠ್ಠಲ ವ್ರಜಕೆ ದೊರೆಯಾಳುವ ॥೭॥"

**Song – 9 ( 1 )**

ಹರಿ ಸುಂದರ ನಂದ ಮುಕುಂದ
ಹರಿ ನಾರಾಯಣ ಹರಿ ಓಂ
ಹರಿ ಸುಂದರ ನಂದ ಮುಕುಂದ
ಹರಿ ನಾರಾಯಣ ಹರಿ ಓಂ
ಹರಿ ಕೇಶವ ಹರಿ ಗೋವಿಂದ
ಹರಿ ನಾರಾಯಣ ಹರಿ ಓಂ
ಹರಿ ಕೇಶವ ಹರಿ ಗೋವಿಂದ
ಹರಿ ನಾರಾಯಣ ಹರಿ ಓಂ

ವನಮಾಲಿ ಮೂರಳಿಧಾರಿ
ಗೋವರ್ಧನ ಗಿರಿವರ್ಧಾರಿ
ವನಮಾಲಿ ಮೂರಳಿಧಾರಿ
ಗೋವರ್ಧನ ಗಿರಿವರಧಾರಿ
ನಿತ್ ನಿತ್ ಕರ ಮಾಖನ ಚೋರಿ
ಗೋಪಿ ಮನ ಹಾರಿ
ಆಓ ರೇ ಗಾಓ ರೇ ಗೋಕುಲ ಕೆ ಪ್ಯಾರೆ
ಆಓ ರೇ ಕಾನ್ಹಾ ರೇ ಗೋಕುಲ ಕೆ ಪ್ಯಾರೆ
ಆಓ ರೇ ನಾಚೋ ರೇ ರಾಸ ರಚಾಓ ರೇ
ಗಾಓ ರೇ ನಾಚೋ ರೇ ರಾಸ ರಚಾಓ ರೇ

ಹೇ ಮೋರ ಮುಖುಟ್ ಗಿರಿಧಾರಿ
ಕಾನ್ಹಾ ಪೀತಾಂಭರ ಧಾರಿ
ಹೇ ಮೋರ ಮುಖುಟ್ ಗಿರಿಧಾರಿ
ಕಾನ್ಹಾ ಪೀತಾಂಭರ ಧಾರಿ
ಗೋಪಿಯಾಂ ಸಂಗ ರಾಸ ರಚಾಯೇ
ಮೋಹನ ಮೂರಳಿ ಧಾರಿ
ಆಓ ರೇ ಆಓ ರೇ ಮೋಹನ ಗಿರಿಧಾರಿ
ಆಓ ರೇ ಕಾನ್ಹಾ ರೇ ಹೇ ಕೃಷ್ಣ ಮೂರಾರಿ
ಆಓ ರೇ ನಾಚೋ ರೇ ರಾಸ ರಚಾಓ ರೇ
ಗಾಓ ರೇ ನಾಚೋ ರೇ ರಾಸ ರಚಾಓ ರೇ

## Song – 9 ( 2 )

ಬಾರೆ ಸಖಿ ಪೋಗುವ ರಾಸ ಕ್ರೀಡೆಯಾಡುವ
ಸಾರಸಾಕ್ಷ ಕೃಷ್ಣನು ತಾ ಕೊಳಲನೂದುವ ।
ಕೊಳಲನೂದುವಾ ಕೃಷ್ಣ ಕೊಳಲನೂದುವ ॥

ಜಾರನೆಂದು ಸಣ್ಣಮಾತನಾಡಿದ್ದಾಯಿತು ಚೋರನೆಂದು ಬಹಳ ದೂರು
ಮಾಡಿದ್ದಾಯಿತು । ಮೂರು ನಿಮಿಷ ಅವನ ಮರೆಯಲಾಗದಾಯಿತು ।
ಬೀರುತಿರುವ ಮೋಹಜಾಲ ಸಡಲದಾಯಿತು ॥
॥ಬಾರೆ ಸಖಿ॥

ಯಾವನೀತನೆಂದು ಚಿಂತೆ ಮಾಡಿದ್ದಾಯಿತು ಗೋವಳನಿವನಲ್ಲವೆಂದು ನಿರ್ಧರಾಯಿತು ।
ಯಾವನಾದರೇನು ಇವನ ಕ್ಷಣವು ಕಾಣದೆ । ಜೀವನ ಕಳೆಯುವುದೆ ದೊಡ್ಡ ಭಾರವಾಯಿತು ॥
॥ಬಾರೆ ಸಖಿ॥

ಮಂದಹಾಸದಿಂದ ಸಕಲ ಜಗವ ಬೆಳಗುವ ಚಂದ್ರನು ತಾನಿವನ ನೋಡಿ
ಬಹಳ ನಾಚುವ । ಸಾಂದ್ರವಾಯಿತಂತರಿಕ್ಷ ಮಧುರ ನಾದದಿ ।
ಮಲಯ ಮಾರುತ ತಾ ತಲೆಯನಾಡುವ ॥
॥ಬಾರೆ ಸಖಿ॥

ನಾದದ ಸುಧೆ ಸಾಗರದಲಿ ತೇಲುವಂತಿದೆ ಮಾಧವ ತಾ ಸುಧೆಯ ರಸವನೆರಚುವಂತಿದೆ ।
ಬಾಧಿಸುತಿಹ ಭವದ ತಾಪವಡಗಿದಂತಿದೆ । ಮಾದರಿಫಲ ರಾಸಕ್ರೀಡೆ ತೋರುವಂತಿದೆ ॥
॥ ಬಾರೆ ಸಖಿ॥

ಸಕಲ ಲೋಕನಾಥನೀತನೆಂದು ತಿಳಿಯಿತು. ಸಕಲವನರ್ಪಿಸುವುದೊಂದೆ
ಮಾರ್ಗ ಉಳಿಯಿತು । ಲಕುಮಿ ಮುರುಳಿ ರೂಪದಲ್ಲಿ
ಇಹುದು ಹೊಳೆಯಿತು । ಭಕುತಿ ಹರಿದು ಎನ್ನ ಮನ ಪ್ರಸನ್ನವಾಯಿತು ॥
॥ಬಾರೆ ಸಖಿ॥"

**Song - 11**

ಬಿನತೀ ಸುನೀಯೇ ನಾಥ್ ಹಮಾರೀ, ಬಿನತೀ ಸುನೀಯೇ ನಾಥ್ ಹಮಾರೀ,

ಹೃದಯೇಶ್ವರ ಹರೀ ಹೃದಯ ಬಿಹಾರೀ, ಹೃದಯೇಶ್ವರ ಹರೀ ಹೃದಯ ಬಿಹಾರೀ,

ಮೋರ್ ಮುಕುಟ ಪೀತಾಂಬರ ಧಾರೀ, ಬಿನತೀ ಸುನೀಯೇ ನಾಥ್ ಹಮಾರೀ ॥

ಜನಮ ಜನಮ ಕೀ ಲಗೀ ಲಗನ್ ಹೈ, ಸಾಕ್ಷೀ ತಾರೋ ಭರಾ ಗಗನ ಹೈ,

ಗಿನ ಗಿನ ಸ್ವಾಶ್ ಆಸ್ ಕಹತೀ ಹೈ, ಆಯೇಂಗೇ ಶ್ರೀ ಕೃಷ್ಣ ಮುರಾರೀ, ॥

ಬಿನತೀ ಸುನೀಯೇ ನಾಥ್ ಹಮಾರೀ...॥

ಸತತ ಪರೀಕ್ಷಾ ಅಪಲಕ್ ಲೋಚನ ಹೇ ,ಭವ ಬಾಧಾ ಬಿಪತಿ ಬಿಮೋಚನ,

ಸ್ವಾಗತ ಕಾ ಅಧಿಕಾರ ದೀಜೀಯೇ, ಶರಣಾಗತ ಹೈ ನಯನ ಪೂಜಾರೀ, ॥

ಬಿನತೀ ಸುನೀಯೇ ನಾಥ್ ಹಮಾರೀ...॥

ಔರ್ ಕಹೂಂ ಕ್ಯಾ ಅಂತರ್ಯಾಮೀ, ತನ ಮನ ಧನ ಪ್ರಾಣೋ ಕೇ ಸ್ವಾಮೀ,

ಕರುಣಾಕರ ಆಕರ್ ಕೇ ಕಹೀಯೇ, ಸ್ವೀಕಾರೀ ವಿನತೀ ಸ್ವೀಕಾರೀ, ॥

ಬಿನತೀ ಸುನೀಯೇ ನಾಥ್ ಹಮಾರೀ...॥

ಬಿನತೀ ಸುನೀಯೇ ನಾಥ್ ಹಮಾರೀ, ಬಿನತೀ ಸುನೀಯೇ ನಾಥ್ ಹಮಾರೀ,

ಹೃದಯೇಶ್ವರ ಹರೀ ಹೃದಯ ಬಿಹಾರೀ, ಹೃದಯೇಶ್ವರ ಹರೀ ಹೃದಯ ಬಿಹಾರೀ,

ಮೋರ್ ಮುಕುಟ ಪೀತಾಂಬರ ಧಾರೀ, ಬಿನತೀ ಸುನೀಯೇ ನಾಥ್ ಹಮಾರೀ ॥

## Song -12

"ತೋಳು ತೋಳು ತೋಳು ರಂಗ ತೋಳನ್ನಾಡೈ ಸ್ವಾಮಿ |ನೀಲವರ್ಣದ ಬಾಲಕೃಷ್ಣನೆ ತೋಳನ್ನಾಡೈ ||ಪ||

ಹುಲಿಯುಗುರರಳೆಲೆ ಮಾಗಾಯಿಗಳನಿಟ್ಟ ತೋಳನ್ನಾಡೈ ಸ್ವಾಮಿ |ಘಲಿರೆಂಬಂದುಗೆ ಗೆಜ್ಜೆಲಿ ನಲಿವುತ್ತ ತೋಳನ್ನಾಡೈ |ನಿ ಲುವಿಗೆ ನಿಲುಕದ ಒರಳ ತಂದಿಟ್ಟ ತೋಳನ್ನಾಡೈ ಸ್ವಾಮಿ |ಚೆಲುವ ಮಕ್ಕಳ ಮುದ್ದು ಮಾಣಿಕವೆ ತೋಳನ್ನಾಡೈ ||

ಪೂತನಿಯೆಂಬವಳಸುವನೆ ಹೀರಿದ ತೋಳನ್ನಾಡೈ ಸ್ವಾಮಿ |ಮಾತೆಯ ಪಿತನ ಅಣುಗನ ಮಡುಹಿದ ತೋಳನ್ನಾಡೈ| |ಮಾತಿಗೆ ಶಿಶುಪಾಲನ ಶಿರತರಿದ ತೋಳನ್ನಾಡೈ ಸ್ವಾಮಿ |ಶ್ರೀ ತುಲಸಿಯ ಪ್ರಿಯ ನಿತ್ಯವಿನೋದಿ ತೋಳನ್ನಾಡೈ ||

ದಟ್ಟಡಿಯಿಡುತಲೆ ಬೆಣ್ಣೆಯ ಮೆಲುವ ತೋಳನ್ನಾಡೈ ಸ್ವಾಮಿ |ಕಟ್ಟಿದ ಕರಡಿಯ ಕರುವೆಂದೆಳೆದ ತೋಳನ್ನಾಡೈ |ಬಟ್ಟಲ ಹಾಲು ಒಲ್ಲೆಂದು ಕಾಡಿದ ತೋಳನ್ನಾಡೈ ಸ್ವಾಮಿ |ಬಟ್ಟಲೊಳುಣಿಸೆ ನಗುವಾತನೆ ತೋಳನ್ನಾಡೈ ||

ಸಜ್ಜನ ಸತ್ಯಕೆ ಧರ್ಮವ ನಡೆಸಿದ ತೋಳನ್ನಾಡೈ ಸ್ವಾಮಿ |ಅರ್ಜುನ ರಥಕೆ ಸಾರಥ್ಯ ಮಾಡಿದ ತೋಳನ್ನಾಡೈ |ಲಜ್ಜೆಗೀಡಾದ ದ್ರೌಪದಿ ಕಾಯ್ದ ತೋಳನ್ನಾಡೈ ಸ್ವಾಮಿ |ವಜ್ರಪಂಜರ ಪಾಂಡವಪ್ರಿಯ ತೋಳನ್ನಾಡೈ ||

ನಖದಿಂದ ಹಿರಣ್ಯಕನುದರವ ಸೀಳಿದ ತೋಳನ್ನಾಡೈ ಸ್ವಾಮಿ |ಸುಖದಿಂದಲಿ ಪ್ರಹ್ಲಾದನ ಕಾಯ್ದ ತೋಳನ್ನಾಡೈ |ವಿಖಳಿತಗೆಡಿಸಿದ ಗೋಪಸ್ತ್ರೀಯರ ತೋಳನ್ನಾಡೈ |ಸ್ವಾಮಿ ಸುಖತೀರ್ಥರ ಪತಿ ಪುರಂದರವಿಠಲ ತೋಳನ್ನಾಡೈ"

## Song – 13

.ಬಸ ಲೇತಾ ಹೂಂ ಮೈಂ ತೇರಾ ನಾಮ್ ಜಪತಾ ಹೂಂ ಕಾನ್ಹಾ, ಸುಬಹೋಂ ಶಾಮ್

ತೇರೆ ಚರಣೋಂ ಮೇ ಹೈ ಚಾರೋಂ ಧಾಮ್, ಮೇರೆ ಕಾನ್ಹಾ…

ಮೈಂ ಕರತಾ ಹೂಂ ತುಮ್ಕೋ ಪ್ರಣಾಮ್

ತುಮ್ಹೀ ಕೃಷ್ಣ ಹೋ ತುಮ್ಹೀ ಮೇರೆ ರಾಮ್

ಮೇರೆ ಬಿಗ್ಡೆ ಬನಾಯೆ ಸಾರೇ ಕಾಮ್, ಮೇರೆ ಕಾನ್ಹಾ…

ಓ ಮುರಲೀ ವಾಲೇ, ಬನ್ಸೀ ಮಧುರ್ ವಾಲೇ

ಆಯಾ ತೇರೆ ದ್ವಾರೇ ಸಂವಾರೇ, ಚರಣೋಂ ಮೇ ಜಗ್ ದೇನಾ

ಕಾನ್ಹಾ ರೆ ಕಾನ್ಹಾ, ತೇರಾ ಮೈಂ ದೀವಾನಾ

ಅಪ್ನೆ ದೀವಾನೇ ಕೋ ಕಾನ್ಹಾ, ಮೀಠಿ ಧೂನ್ ಸುನಾ ದೇನಾ

ಕಾನ್ಹಾ ರೆ ಕಾನ್ಹಾ, ತೇರಾ ಮೈಂ ದೀವಾನಾ

ಅಪ್ನೆ ದೀವಾನೇ ಕೋ ಶ್ಯಾಮ್, ಮೀಠಿ ಧೂನ್ ಸುನಾ ದೇನಾ

ಶ್ಯಾಮ್ ರಂಗ್ ಮೋರ್ ಪಂಖ್ ಬನ್ಸೀ ಲಿಯೇ ಹಾಥ್ ಮೆ

ಮುಸ್ಕುರಾತೆ ಮುಖ್ ಸೆ ಬರಸೆ ಗ್ಯಾನ್

ಇನ್ಕಿ ಬಾತ್ ಮೇ ಧೇನು ಸಂಗ್ ಹೋ ಮಗನ್

ಝೂಮೇ ಗಾಯೇ ಯೇ ಪವನ್ ಧುನ್ ಮೆ ತೇರಿ ರಮ್ ಗಯೇ ಕಾನ್ಹಾ

ಧರ್ತಿ ಯೇ ಅಂಬರ್ ಗಗನ ನಂದ್ ಕೆ ಓ ಲಾಲಾ, ಬ್ರಜ್ ಕೆ ಗೋಪಾಲಾ

ಆಯಾ ತೇರೆ ದ್ವಾರೇ ಸಾವಾರೇ, ಚರಣೋಂ ಮೇ ಜಾಗ್ ದೇನಾ

ಕಾನ್ಹಾ ರೆ ಕಾನ್ಹಾ, ತೇರಾ ಮೈಂ ದೀವಾನಾ

ಅಪ್ನೆ ದೀವಾನೇ ಕೋ ಕಾನ್ಹಾ, ಮೀಠಿ ಧುನ್ ಸುನಾ ದೇನಾ

ಸೃಷ್ಟಿ ಕಾ ರಚಯಿತಾ ತೂ ಕರ್ಮೋಂ ಕಾ ಫಲ್ ದೇತಾ ತೂ

ಆಯೇ ಜೋ ಭೀ ತೇರಿ ಶರಣ್ ಮೆ ಕಷ್ಟೋಂ ಕೋ ಹರ್ ಲೇತಾ ತೂ

ತೂಹಿ  ಮೇರಿ ತೂಹಿ ಹರ್ ಆಸ್ ಮೇ ಕಾನ್ಹ

ಮನ್ ಮಂದಿರ್ ಅರದಾಸ್ ಮೇ ಕಾನ್ಹ

ಜೀವನ್ ಮರಣ್ ಕಾ ಶೋಕ್ ಕಹಾ ಮೊಹೇ

ತೂಹಿ ಜಬ್ ಹರ್ ಸಾಸ್ ಮೇ ಕಾನ್ಹ

ತೂಹಿ ರಾಮ್ ತೂಹಿ ಕೃಷ್ಣ,ತೂಹಿ ಹರಿ ನಾಮ್ ಭಿ

ತೂಹಿ ಆದಿ ತೂಹಿ ಅಂತ್ , ತೂಹಿ ಗೀತಾ ಜ್ಞಾನ್ ಭೀ

ತುಮ್ ಬಿನ್ ಹೇ ಮೆರೆ ಪ್ರಭು, ಮೇರಾ ಕ್ಯಾ ವಜೂದ್ ಹೇ ತೇರಾ ಮೇರಾ ನಾತಾ ಕಾನ್ಹ, ಜನ್ಮೋ ಸೇ ಅಟೂಟ್ ಹೈ

ಓ ಪ್ರಿಯತಮ ಪ್ಯಾರೆ, ತುಮ್ ಬ್ರಜ್ ಕೆ ದುಃಲ್ಹಾರೆ

ತೆರಿ ಬಾಂಟ್ ನಿಹಾರು ಆಕರ್, ಮುಝುಕೋ ತೂ ಅಪನಾ ಲೆನಾ

ಹರೇ ಕೃಷ್ಣ ಹರೇ ಕೃಷ್ಣ ಹರೇ ಕೃಷ್ಣ ಹರೇ ಹರೇ

ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ

**Song -14**

"ಗುಬ್ಬಿಯಾಳೊ ಗೋವಿಂದ ಗೋವಿಂದಾ |

ಗೋವಿಂದ ಗೋವಿಂದಾನೆಂದು ನೆನೆಯಿರೊ ಗುಬ್ಬಿಯಾಳೊ ||ಪ||

ಕೇಶವನ್ನ ನೆನೆದರೆ ಕ್ಲೇಶ ಪರಿಹಾರವು ಗುಬ್ಬಿಯಾಳೊ

ನಾರಾಯಣನ ಧ್ಯಾನದಿಂದ ನರಕಭಯವಿಲ್ಲವೊ ಗುಬ್ಬಿಯಾಳೊ ||೧||

ಮಾಧವನ್ನ ನೆನೆದರೆ ಮನೋಭೀಷ್ಟ ಕೊಡುವೊನು ಗುಬ್ಬಿಯಾಳೊ

ಗೋವಿಂದನ್ನ ದಯದಿಂದ ಘೋರದುರಿತ ನಾಶನವು ಗುಬ್ಬಿಯಾಳೊ ||೨||

ವಿಷ್ಣುಭಜನೆಯಿಲ್ಲದವಗೆ ವೈಷ್ಣವರ ಜನ್ಮವುಂಟೇ ಗುಬ್ಬಿಯಾಳೊ

ಮಧುಸೂದನನ ಧ್ಯಾನದಿಂದ ಅತಿಶಯವು ಇಹುದೊ ಗುಬ್ಬಿಯಾಳೊ ||೩||

ತ್ರಿವಿಕ್ರಮನ ನೆನೆದರೆ ಸಾವಿತ್ರಿಯಾಗಿಹರೊ ಗುಬ್ಬಿಯಾಳೊ

ವಾಮನದೇವರು ನಮಗೆ ವರಗಳ ಕೊಡುವೋರು ಗುಬ್ಬಿಯಾಳೊ ||೪||

ಶ್ರೀಧರನ್ನ ನೆನೆದರೆ ಸಿರಿ ನಮಗೆ ಒಲಿವಳೊ ಗುಬ್ಬಿಯಾಳೊ

ಹೃಷೀಕೇಶನ ಧ್ಯಾನದಿಂದ ಹೃದಯ ಪರಿಶುದ್ಧವೊ ಗುಬ್ಬಿಯಾಳೊ ||೫||

ಪದ್ಮನಾಭ ನಮ್ಮೆಲ್ಲರ ಪಾಲಿಸಿ ರಕ್ಷಿಪನೊ ಗುಬ್ಬಿಯಾಳೊ

ದಾಮೋದರನ ನೆನೆದರೆ ಪಾಮರತ್ವ ಬಿಡಿಸುವನೊ ಗುಬ್ಬಿಯಾಳೊ ||೬||

ಸಂಕರ್ಷಣನ ಧ್ಯಾನದಿಂದ ಸಂತಾನ ಅಭಿವೃದ್ಧಿಯು ಗುಬ್ಬಿಯಾಳೊ

ವಾಸುದೇವನ ದಯದಿಂದ ವಂಶ ಉದ್ದಾರವೊ ಗುಬ್ಬಿಯಾಳೊ ||೭||

ಪ್ರದ್ಯುಮ್ನನ ನೆನೆದರೆ ಭೂಪ್ರದಕ್ಷಿಣೆ ಫಲವು ಗುಬ್ಬಿಯಾಳೊ

ಅನಿರುದ್ಧನ ಸೇವಿಸೆ ಪುನೀತರಹೆವೊ ಗುಬ್ಬಿಯಾಳೊ ||೮||

ಪುರುಷೋತ್ತಮನ್ನ ಪುರಾಣಪುರುಷನೆಂದು ತಿಳಿಯಿರೊ ಗುಬ್ಬಿಯಾಳೊ

ಅಧೋಕ್ಷಜ ನಮ್ಮೆಲ್ಲರಿಗಾಧಾರವಾಗಿಹನೊ ಗುಬ್ಬಿಯಾಳೊ ||೯||

ನಾರಸಿಂಹದೇವರು ನಮ್ಮ ಕುಲದೈವವೊ ಗುಬ್ಬಿಯಾಳೊ

ಅಚ್ಯುತ ಲಕ್ಷ್ಮಿಯ ಕೂಡಿ ಸಚ್ಚಿದಾನಂದನೊ ಗುಬ್ಬಿಯಾಳೊ ||೧೦||

ಜನಾರ್ದನದೇವರು ಜಗಕೆಲ್ಲ ಶ್ರೇಷ್ಠರೊ ಗುಬ್ಬಿಯಾಳೊ

ಉಪೇಂದ್ರನು ನಮ್ಮ ಅಪರಾಧವ ಕ್ಷಮಿಸುವನೊ ಗುಬ್ಬಿಯಾಳೊ ||೧೧||

ಹರಿನಾಮಾಮೃತಕೆ ಸರಿ ಧರೆಯೊಳಗೆ ಇಲ್ಲವೊ ಗುಬ್ಬಿಯಾಳೊ

ಶ್ರೀಕೃಷ್ಣ ರಂಗೇಶಯೆಂಬೊ ಸಿದ್ಧಕ್ರಿಯ ಬಲ್ಲರೆ ಗುಬ್ಬಿಯಾಳೊ ||೧೨||

ಈ ಗುಬ್ಬಿ ಪಾಡುವರಿಗೆ ಇಹ ಪರವು ಸಂತತವು ಗುಬ್ಬಿಯಾಳೋ

ಧರಣಿಯೊಳು ಆಚಂದ್ರಾರ್ಕ ತಾರಕವಾಗಿಹರು ಗುಬ್ಬಿಯಾಳೊ ||೧೩||

ಹಯವದನನ್ನ ಪಾದಧ್ಯಾನ ನಿತ್ಯ ಮರೆಯದೆ ನೀ ನೆನೆ ಮನವೆ

ನಮ್ಮ ಹಯವದನನ್ನ ಪಾದವೇ ನಿತ್ಯ ಮನವೆ ಗುಬ್ಬಿಯಾಳೊ ||೧೪ ||

**Song -15**

"ನರಜನ್ಮ ಬಂದಾಗ ನಾಲಿಗೆ ಇರುವಾಗ ಕೃಷ್ಣಾ ಎನಬಾರದೆ||ಪ||

ಕೃಷ್ಣನ ನೆನೆದರೆ ಕಷ್ಟವೊಂದಿಷ್ಟಿಲ್ಲ ಕೃಷ್ಣಾ ಎನಬಾರದೆ||ಅ.ಪ||

ಮಲಗೆದ್ದು ಮೈಮುರಿದು ಏಳುತ್ತಲೊಮ್ಮೆ ಕೃಷ್ಣಾ ಎನಬಾರದೆ ನಿತ್ಯ ಸುಳಿದಾಡುವಾಗಲಿ
ತಿರುಗಾಡುತಲೊಮ್ಮೆ ಕೃಷ್ಣಾ ಎನಬಾರದೆ||೧||

ಪರಿಪರಿ ಹಾಸ್ಯವ ಮಾಡುತ ಲೋಮ್ಮೆಕೃಷ್ಣ ಎನಬಾರದೆ। ಕಂದನ ಬಿಗಿದಪ್ಪಿ ಮುದ್ದಾಡುತಲೊಮ್ಮೆ
ಕೃಷ್ಣ ಎನಬಾರದೆ

ಸ್ನಾನಪಾನ ಜಪತಪಗಳ ಮಾಡುತ್ತ ಕೃಷ್ಣಾ ಎನಬಾರದೆ

ಶಾಲ್ಯಾನ್ನ ಶಡುರಸ ತಿಂದು ತೃಪ್ತರಾಗಿ ಕೃಷ್ಣಾ ಎನಬಾರದೆ||೨||

ಮೇರೆ ತಪ್ಪಿ ಮಾತನಾಡುವಾಗಲೊಮ್ಮೆ ಕೃಷ್ಣಾ ಎನಬಾರದೆ

ದಾರಿಯ ನಡೆವಾಗ ಭಾರವ ಹೊರುವಾಗ ಕೃಷ್ಣಾ ಎನಬಾರದೆ||೩||

ದುರಿತ ರಾಶಿಗಳನು ತರಿದು ಬಿಸಾಡಲು ಕೃಷ್ಣಾ ಎನಬಾರದೆ ಸದಾ

ಗರುಡಗಮನ ಸಿರಿ ಪುರಂದರ ವಿಠಲನ್ನೇ ಕೃಷ್ಣಾ ಎನಬಾರದೆ||೪||"